

# ಬಾಟಲಿ ಅರಳಿ ಪಾಟ್‌ಗಳಾಗಿ...!



ಶಶಿಪ್ರಭಾ ಡಿ.ಕೆ.

**ನೀರು ಕುಡಿದು ಬಿಸಾಡಿದ ಪ್ಲಾಸ್ಟಿಕ್ ಬಾಟಲಿಗಳು ವಿವಿಧ ಆಕರ್ಷಕ ವಿನ್ಯಾಸದ ಹೂವಿನ ಗಿಡ ಬೆಳೆಸುವ 'ಪಾಟ್'ಗಳಾಗಿ ಪರಿವರ್ತಿತವಾಗುತ್ತವೆ. ನಿರುಪಯುಕ್ತ ಎನಿಸುವ ಬಾಟಲಿ, ಕ್ಯಾನ್, ಟಯರ್, ಕಂಟೈನರ್‌ಗಳು ವೇಣೂರಿನ ಶಿಕ್ಷಕಿ ಶಶಿಪ್ರಭಾ ಅವರ ಕೈಚಳಕದಿಂದ 'ಜೀವಕಳೆ' ತುಂಬಿ ನಳನಳಿಸುತ್ತವೆ.**

■ **ಉಮಾ ಅನಂತ್**

ಆ ಮಹಿಳಾ ಮಂಡಳಿಯಲ್ಲಿ ಅಂದು ಬೇಸಿಗೆ ಶಿಬಿರ. ಮಕ್ಕಳಿಗೆ ಗೊಂಬೆ ತಯಾರಿಸುವುದು, ಪೇಪರ್ ಕಟಿಂಗ್‌ನಲ್ಲಿ ಆರ್ಟ್ ವರ್ಕ್ ಮಾಡುವುದು, ಐಸ್‌ಕ್ಯಾಂಡಿ ಕಡ್ಡಿಯಿಂದ ಬುಟ್ಟಿ ತಯಾರಿಸುವುದು ಮುಂತಾದ ಕರಕುಶಲ ಕಲೆ ಹೇಳಿಕೊಡಲಾಗುತ್ತಿತ್ತು. ಆಗ ತಾನೆ ವೇಣೂರಿನ ವಿದ್ಯೋದಯ ಹಿರಿಯ ಪ್ರಾಥಮಿಕ ಶಾಲೆಯಿಂದ ಮುಖ್ಯೋಪಾಧ್ಯಾಯಿನಿ ಆಗಿ ನಿವೃತ್ತಿ ಆಗಿದ್ದ ಶಶಿಪ್ರಭಾ ಅವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಕರೆಸಲಾಗಿತ್ತು. ಅವರು ಮಕ್ಕಳಿಗೆ ಹೇಳಿಕೊಟ್ಟ ಕರಕುಶಲ ಕಲೆ, ಕಸದಿಂದ ರಸ ಮಾಡುವ ಕೌಶಲ ಎಲ್ಲರನ್ನೂ ಬೆರಗಾಗಿಸಿತ್ತು.

ನೀರು ಕುಡಿದ ಬಳಿಕ ಬಿಸಾಡುವ ಪ್ಲಾಸ್ಟಿಕ್ ಬಾಟಲಿಗಳನ್ನು ಬಳಸಿ ಅದಕ್ಕೆ ಪೈಂಟ್ ಬಳಿದು ಸುಂದರ ಹೂಕುಂಡಗಳನ್ನು ತಯಾರಿಸಿದ್ದರು ಶಶಿಪ್ರಭಾ. ಸೃಜನಶೀಲತೆ, ತಾಳ್ಮೆ, ಕ್ರಿಯಾಶೀಲ ಮನಸ್ಸು ಇದ್ದರೆ ನಿರುಪಯುಕ್ತ ವಸ್ತುಗಳು ಹೇಗೆ ಜೀವಕಳೆ ಪಡೆದುಕೊಳ್ಳುತ್ತವೆ ಎಂಬುದಕ್ಕೆ ಇವರು ಡೆಮೊ ಮಾಡಿ ತೋರಿಸಿದ ಪ್ಲಾಸ್ಟಿಕ್ ಬಾಟಲಿ, ಸುಂದರ ಪಾಟ್‌ಗಳಾಗಿ ಪರಿವರ್ತನೆಯಾದದ್ದೇ ಸಾಕ್ಷಿಯಾಯಿತು. ಅಲ್ಲದೆ ಪ್ಲಾಸ್ಟಿಕ್ ಕ್ಯಾನ್, ಕಂಟೈನರ್, ಟಯರ್‌ಗಳು ಹೊಸ ರೂಪ ಪಡೆದು ಅದರಲ್ಲಿ ಮಣ್ಣು ಹಾಕಿ ಗಿಡಗಳನ್ನು ತುಂಬಿ ಮನೆ ಮುಂದೆ ಇಟ್ಟಾಗ ಸುಂದರ ಹೂತೋಟದಲ್ಲಿ ಹೂಗಳು ನಳನಳಿಸುವ ಕಲೆ ಶಿಬಿರಾರ್ಥಿಗಳಲ್ಲಿ ಹೊಸ ಹುರುಪು ಮೂಡಿಸಿತ್ತು.

ಪ್ಲಾಸ್ಟಿಕ್ ಬಾಟಲಿ, ಹಳೆಯ ಕೀ, ಕೀಚೈನ್, ಬೇಡದ ಟಯರ್, ಕ್ಯಾನ್‌ಗಳು, ಟಿನ್‌ಗಳು, ಸೀಡಿಗಳು. ಹಳೆಯ ಬಲ್ಬ್.. ಇವುಗಳಿಗೆ ಆಕರ್ಷಕ ಪೈಂಟ್ ಬಳಿದು ಒಳಾಂಗಣ, ಹೊರಾಂಗಣ ವಿನ್ಯಾಸ ಮಾಡಬಹುದು; ಮನೆಯನ್ನು ಅಲಂಕರಿಸಬಹುದು ಎಂಬುದನ್ನು ಅಂದು ಶಶಿಪ್ರಭಾ ಪ್ರಾತ್ಯಕ್ಷಿಕೆ ಮೂಲಕ ಮನದಟ್ಟು ಮಾಡಿದ್ದರು.

ಅವರ ಮನೆಯಲ್ಲಿ ಬಾಟಲಿಗಳು ಹತ್ತು ಹಲವು ಚಿತ್ತಾರ ಪಡೆಯುತ್ತವೆ. ಪ್ಲೈನ್ ಬಾಟಲಿ ಮೇಲೆ ಹಳದಿ, ಹಸುರು, ಕೆಂಪು, ನೀಲಿ ಬಣ್ಣಗಳು ತಳುಕು